ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 07-06-1970

*<u>ದಿವ್ಯ ಮೂರ್ತಿಯಾಗುವ ವಿಧಿ</u>* (दिव्य मूर्त बनने की विधि)

ತಾವೆಲ್ಲರೂ ಕಣ್ಣುಗಳಿಂದ ನೋಡುತ್ತಿರುವಿರಿ, ಬಾಪ್ ದಾದಾ ಸಹ ಕಣ್ಣುಗಳ ಆಧಾರ ಪಡೆದು ನೋಡುತ್ತಿದ್ದಾರೆ. ಬಾಪ್ ದಾದಾ ಏನನ್ನು ನೋಡುತ್ತಿದ್ದಾರೆ? ತಾವೆಲ್ಲರೂ ಏನನ್ನು ನೋಡುತ್ತಿರುವಿರಿ? ನೋಡುತ್ತಿದ್ದೀರಾ ಅಥವಾ ನೋಡುತ್ತಿದ್ದರೂ ನೋಡದಂತಿರುವಿರಾ? ಯಾವ ಸ್ಥಿತಿಯಿದೆ? ಬಾಪ್ ದಾದಾ ಏನನ್ನು ನೋಡುತ್ತಿದ್ದಾರೋ ಅದನ್ನೇ ತಾವೂ ಸಹ ನೋಡುತ್ತಿದ್ದೀರಾ? ಸಂಕಲ್ಪಗಳನ್ನು ಗ್ರಹಿಸುವ ಅಭ್ಯಾಸವಿದ್ದರೆ ಸಹಜವಾಗಿ ಸಂಕಲ್ಪರಹಿತರೂ ಸಹ ಆಗಬಹುದು. ಯಾವಾಗ ಬೇರೆಯವರ ಸಂಕಲ್ಪಗಳನ್ನು ಗುರುತಿಸಲು ಆಗುವುದಿಲ್ಲವೋ ಆಗ ಹೆಚ್ಚು ಸಂಕಲ್ಪಗಳನ್ನು ನಡೆಸಬೇಕಾಗುತ್ತದೆ. ಆದರೆ ಪ್ರತಿಯೊಬ್ಬರ ಸಂಕಲ್ಪಗಳನ್ನು ಓದುವ ಅಭ್ಯಾಸವಿದ್ದರೆ ವ್ಯರ್ಥ ಸಂಕಲ್ಪಗಳು ಹೆಚ್ಚು ನಡೆಯುವುದಿಲ್ಲ ಮತ್ತು ಸಹಜವಾಗಿ ಒಂದು ಸಂಕಲ್ಪದಲ್ಲಿ, ಏಕರಸ ಸ್ಥಿತಿಯಲ್ಲಿ ಒಂದು ಕ್ಷಣದಲ್ಲಿ ಸ್ಥಿತರಾಗುವಿರಿ. ಆದ್ದರಿಂದ ಸಂಕಲ್ಪಗಳನ್ನು ಗ್ರಹಿಸುವುದೂ ಸಂಪೂರ್ಣತೆಯ ಒಂದು ಲಕ್ಷಣವಾಗಿದೆ. ಎಷ್ಟೆಷ್ಟು ಅವ್ಯಕ್ತ ಭಾವದಲ್ಲಿ ಸ್ಥಿತರಾಗುವಿರೋ ಅಷ್ಟು ಪ್ರತಿಯೊಬ್ಬರ ಭಾವವನ್ನು ಸಹಜವಾಗಿ ತಿಳಿಯುವಿರಿ. ಪರಸ್ಪರರ ಭಾವವನ್ನು ತಿಳಿಯದಿರುವುದರ ಕಾರಣ ಅವ್ಯಕ್ತ ಭಾವದ ಕೊರತೆ, ಅವ್ಯಕ್ತ ಸ್ಥಿತಿ ಒಂದು ಕನ್ನಡಿಯಾಗಿದೆ. ಯಾವಾಗ ತಾವು ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗುವಿರೋ ಆಗ ಯಾವುದೇ ವ್ಯಕ್ತಿಯ ಭಾವ, ಅವ್ಯಕ್ತ ಸ್ಥಿತಿ ರೂಪದ ಕನ್ನಡಿಯಲ್ಲಿ ಪೂರ್ಣ ಸ್ಪಷ್ಟ ಕಂಡುಬರುವುದು, ಆಗ ಪರಿಶ್ರಮ ಪಡಬೇಕಾಗಿಲ್ಲ. ಯಾರ ಭಾವವನ್ನಾದರೂ ತಿಳಿಯಲು ಕನ್ನಡಿಗೆ ಪರಿಶ್ರಮ ಪಡಬೇಕಾಗಿಲ್ಲ. ಎಷ್ಟೆಷ್ಟು ಅವ್ಯಕ್ತ ಸ್ಥಿತಿಯಿರುವುದೋ, ಅಷ್ಟು ದರ್ಪಣ ಸ್ವಚ್ಛ ಮತ್ತು ಶಕ್ತಿಶಾಲಿಯಾಗಿರುವುದು. ಅಷ್ಟೇ ಬಹಳ ಸಹಜವಾಗಿ ಪರಸ್ಪರರ ಭಾವವು ಸ್ಪಷ್ಟ ತಿಳಿಯುತ್ತದೆ. ಅವ್ಯಕ್ತ ಸ್ಥಿತಿ ರೂಪದ ದರ್ಪಣವನ್ನು ಸ್ವಚ್ಛ ಮತ್ತು ಸ್ಪಷ್ಟ ಮಾಡಲು ಮೂರು ಮಾತುಗಳು ಆವಶ್ಯಕ. ಆ ಮಾತುಗಳಲ್ಲಿ ಯಾವುದಾದರೊಂದು ಮಾತನ್ನು ಹೇಳಿ? (ಪ್ರತಿಯೊಬ್ಬರೂ ಹೇಳಿದರು) ಇಂದು ಪ್ರತಿಯೊಬ್ಬರ ಸರಳತೆ, ಶ್ರೇಷ್ಠತೆ ಮತ್ತು ಸಹನಶೀಲತೆ ಈ ಮೂರನ್ನು ಪ್ರತಿಯೊಬ್ಬರಲ್ಲಿ ನೋಡುತ್ತಿದ್ದೇವೆ. ಈ ಮೂರೂ ಮಾತುಗಳಿಂದ ಯಾವುದಾದರೂ ಒಂದರ ಸರಿಯಾಗಿ ಧಾರಣೆಯಾದರೆ ದರ್ಪಣ ಸ್ಪಷ್ಟವಾಗಿದ್ದಂತೆ. ಒಂದು ವೇಳೆ ಒಂದು ಮಾತಿನ ಕೊರತೆಯಿದ್ದರೆ ಆ ದರ್ಪಣದಲ್ಲಿ ಕೊರತೆಯ ಕಲೆ ಕಂಡು ಬರುತ್ತದೆ. ಆದ್ದರಿಂದ ಯಾವುದೇ ಕಾರ್ಯವನ್ನು ಮಾಡುವಾಗ ಪ್ರತಿಯೊಂದರಲ್ಲಿ ಮೂರೂ ಮಾತುಗಳನ್ನು ಪರೀಕ್ಷಿಸಿ, ಎಲ್ಲಾ ಪ್ರಕಾರದಿಂದ ಸರಳತೆಯೂ ಇರಲಿ, ಸಹನಶೀಲತೆಯೂ ಇರಲಿ ಮತ್ತು ಶ್ರೇಷ್ಠತೆಯೂ ಇರಲಿ, ಸಾಧಾರಣತೆಯೂ ಬೇಡ. ಈಗ ಎಲ್ಲಿ ಶ್ರೇಷ್ಠತೆಯಿರಬೇಕೋ ಅಲ್ಲಿ ಸಾಧಾರಣತೆ ಕಂಡು ಬರುತ್ತಿದೆ. ಸಾಧಾರಣತೆಯನ್ನು ಶ್ರೇಷ್ಠತೆಯಲ್ಲಿ ಪರಿವರ್ತನೆ ಮಾಡಿ. ಮತ್ತು ಪ್ರತಿಯೊಂದು ಕಾರ್ಯದಲ್ಲಿ ಸಹನಶೀಲತೆಯನ್ನು ಮುಂದೆ ಇಟ್ಟುಕೊಳ್ಳಿ. ತಮ್ಮ ಮುಖದಲ್ಲಿ, ವಾಣಿಯಲ್ಲಿ ಸರಳತೆಯನ್ನು ಧಾರಣೆ ಮಾಡಿ ನಂತರ ನೋಡಿ ಸೇವೆ ಅಥವಾ ಕರ್ತವ್ಯದಲ್ಲಿ ಸಫಲತೆ ಎಷ್ಟು ಶ್ರೇಷ್ಠವಿರುವುದು. ಇಲ್ಲಿಯವರೆಗೆ ಕಾರ್ಯದ ಫಲಿತಾಂಶ ಏನು ಕಂಡುಬರುತ್ತದೆ? ಯೋಜನೆ ಮತ್ತು ಪ್ರತ್ಯಕ್ಷತೆಯಲ್ಲಿ ಎಷ್ಟು ಅಂತರವಿದೆ?

ಅಂತರದ ಕಾರಣವೇನಾಗಿದೆ? ಮೂರು ರೂಪಗಳಲ್ಲಿ ಈಗ ಪೂರ್ಣ ಸ್ವಚ್ಛವಾಗಿ ತಯಾರಾಗಿಲ್ಲ ಸ್ಮೃತಿಯಲ್ಲಿಯೂ, ವಾಣಿಯಲ್ಲಿಯೂ ಸ್ವಚ್ಛ(ತಿಳಿ)ವಾಗಿರಬೇಕು. ಯಾವುದೇ ಹಳೆಯ ಸಂಸ್ಕಾರಗಳ ಕಲೆಯಿರಬಾರದು ಮತ್ತು ಕರ್ಮದಲ್ಲಿ ತಿಳಿ ಎಂದರೆ ಶ್ರೇಷ್ಠತೆ, ಒಂದು ವೇಳೆ ತಿಳಿಯಾದರೆ, ಯೋಜನೆ(plan) ಮತ್ತು ಪ್ರತ್ಯಕ್ಷತೆ (ಪ್ರ್ಯಾಕ್ಟಿಕಲ್) ಒಂದೇ ಆಗುವವು. ಆಗ ಸಫಲತೆ ವಿಮಾನದಂತೆ ನಿಮ್ಮ ಹತ್ತಿರ ಹಾರಿ ಬರುವುದು. ಆದ್ದರಿಂದ ಪ್ರತಿಯೊಂದು ಮಾತಿನಲ್ಲಿ ಮನಸ್ಸು, ಮಾತು ಕರ್ಮದಲ್ಲಿ ಮತ್ತು ಚಿಕ್ಕ ಪುಟ್ಟ ಮಾತುಗಳಲ್ಲಿಯೂ ಎಚ್ಚರಿಕೆಯಿರಬೇಕು. ಮನ, ವಚನ ಕರ್ಮದಲ್ಲಿಯಂತೂ ಇರಲೇಬೇಕು ಆದರೆ ಆದರ ಜೊತೆಗೆ ಈ ಅಲೌಕಿಕ ಸಂಬಂಧದಲ್ಲಿ ತಿಳಿ ಯಾಗಿದ್ದರೆ ಸೇವೆಯಲ್ಲಿ ಸಫಲತೆ ತಮ್ಮೆಲ್ಲರ ಮಸ್ತಕದಲ್ಲಿ ನಕ್ಷತ್ರದ ರೂಪದಲ್ಲಿ ಹೊಳೆಯುವುದು. ಆಗ

ಪ್ರತಿಯೊಬ್ಬರೂ ತಮ್ಮನ್ನು ಸಫಲತೆಯ ನಕ್ಷತ್ರವೆಂದು ನೋಡುವರು. ಅದಕ್ಕಾಗಿ ಯಾವ ಸ್ಲೋಗನ್ ನೆನಪಿಟ್ಟುಕೊಳ್ಳುವಿರಿ ಎಂಬುದನ್ನು ಹೇಳಿದ್ದೆವಲ್ಲವೇ? 'ಸಫಲತೆ ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆ'. ಆಗ ನಿಮ್ಮನ್ನು ಯಾರೇ ನೋಡಿದರೂ ಅವರಿಗೆ ದೂರದಿಂದಲೇ ದಿವ್ಯಮೂರ್ತಿ ಕಂಡು ಬರುವುದು, ಸಾಧಾರಣ ಮೂರ್ತಿಯಲ್ಲ ಆದರೆ ದಿವ್ಯಮೂರ್ತಿ. ಇತ್ತೀಚೆಗೆ ಬಹಳ ಸೇವೆಯಲ್ಲಿ ವ್ಯಸ್ತರಾಗಿರುವಿರಿ. ಏನೆಲ್ಲಾ ಮಾಡಿದಿರೋ ಬಹಳ ಚೆನ್ನಾಗಿ ಮಾಡಿರುವಿರಿ. ಇನ್ನು ಮುಂದೆ ಸಫಲತೆಯನ್ನು ಸಮೀಪ ತನ್ನಿ. ಎಷ್ಟೆಷ್ಟು ಪರಸ್ಪರರು ಸಮೀಪ ಬರುವಿರೋ ಅಷ್ಟು ಸಫಲತೆ ಸಮೀಪ ಬರುವುದು. ಪರಸ್ಪರರು ಸಮೀಪ ಬರುವುದು ಎಂದರೆ ಸಂಸ್ಕಾರಗಳಲ್ಲಿ ಸಮೀಪ, ಆಗ ಯಾವ ಸಮ್ಮೇಳನದಲ್ಲಾದರೂ ಸಫಲತೆ ಬರುವುದು. ಸಮಯ ಸಮೀಪ ಬರುತ್ತಿರುವಂತೆ ಎಲ್ಲರೂ ಸಮೀಪಕ್ಕೆ ಬರುತ್ತಿರುವರು ಆದರೆ ಈಗ ಇಂತಹ ಸಮೀಪತೆಯಲ್ಲಿ ಏನನ್ನು ತುಂಬಬೇಕು? ಎಷ್ಟು ಸಮೀಪತೆಯೋ ಅಷ್ಟು ಪರಸ್ಪರರಿಗೆ ಗೌರವ ಕೊಡುವುದು. ಎಷ್ಟು ಪರಸ್ಪರರು ಗೌರವ ಕೊಡುವಿರೋ ಅಷ್ಟು ಇಡೀ ವಿಶ್ವ ತಮಗೆ ಸನ್ಮಾನವನ್ನು ಮಾಡುವುದು. **ಗೌರವ ಕೊಡುವುದರಿಂದ ಗೌರವ ಸಿಗುವುದು. ಕೊಡುವುದರಿಂದ ಸಿಗುವುದೇ ಹೊರತು ತೆಗೆದುಕೊಳ್ಳುವುದರಿಂದ ಅಲ್ಲ**. ಕೆಲವು ವಸ್ತುಗಳು ತೆಗೆದುಕೊಳ್ಳುವುದರಿಂದ ಸಿಗುತ್ತದೆ ಮತ್ತು ಕೆಲವು ವಸ್ತುಗಳು ಕೊಡುವುದರಿಂದ ಸಿಗುತ್ತವೆ. ಆದ್ದರಿಂದ ಯಾರಿಗಾದರೂ ಗೌರವ ಕೊಡುವುದು ಎಂದರೆ ಸರ್ವರಿಗೆ ಗೌರವ ಕೊಡುವುದು ಮತ್ತು ಭಾಷೆಯಲ್ಲಿಯೂ ಪರಿವರ್ತನೆಯಾಗಬೇಕು. ಇಂದು ಎಲ್ಲಾ ಸೇವಾಧಾರಿಗಳು ಕುಳಿತಿರುವಿರಲ್ಲವೇ? ಆದ್ದರಿಂದ ಭವಿಷ್ಯದ ಸೂಚನೆ ಕೊಡುತ್ತಿದ್ದೇವೆ. ಎಂದಾದರೂ ಯಾರದೇ ವಿಚಾರ ಸ್ಪಷ್ಟವಾಗದಿದ್ದರೆ ಅವರು ಅದನ್ನು ಹೇಳಿದಾಕ್ಷಣ "ಇಲ್ಲ ಎಂದು ಹೇಳಬಾರದು. ಯಾವಾಗಲೂ "ಆಗಲಿ' ಎಂಬ ಶಬ್ದ ಬರಬೇಕು. ಯಾವಾಗ ಇಲ್ಲಿ "ಆಗಲಿ" ಎನ್ನುವಿರೋ ಆಗ ಸತ್ಯಯುಗದಲ್ಲಿ ತಮ್ಮ ಪ್ರಜೆಗಳು ಅಷ್ಟೇ "ಆಗಲಿ" ಎನ್ನುವರು. ಒಂದು ವೇಳೆ ಇಲ್ಲಿ "ಇಲ್ಲ" ಎಂದರೆ ಅಲ್ಲಿಯೂ ಪ್ರಜೆಗಳು ದೂರದಿಂದಲೇ ಪ್ರಣಾಮ ಮಾಡುವರು. ಆದ್ದರಿಂದ ಇಲ್ಲ ಎಂಬ ಶಬ್ದವನ್ನು ತೆಗೆಯಬೇಕು.

ಯಾವುದೇ ಮಾತಿರಲಿ ಮೊದಲು ಆಗಲಿ ಎನ್ನುವುದೇ ಬೇರೆಯವರ ಸಂಸ್ಕಾರಗಳನ್ನು ಸರಳ ಮಾಡಿಕೊಳ್ಳುವ ಸಾಧನವಾಗಿದೆ. ತಿಳಿಯಿತೇ? ವರ್ತಮಾನದಲ್ಲಿ ಮಾಡುವ ಕರ್ಮಗಳು ಭವಿಷ್ಯದಲ್ಲಿ ನಿಯಮಗಳಾಗುವವು ಎಂದು ಹೇಳಿದ್ದೆವಲ್ಲವೇ. ತಮ್ಮೆಲ್ಲರ ಕರ್ಮ ಭವಿಷ್ಯದ ನಿಯಮವಾಗುತ್ತದೆ. *ಕಾನೂನು ನಿರ್ಮಾಪಕರು* ಯೋಚಿಸಿ, ತಿಳಿದು ಶಬ್ದಗಳನ್ನು ಉಪಯೋಗಿಸುತ್ತಾರೆ ಏಕೆಂದರೆ ಅವರ ಒಂದೊಂದು ಶಬ್ದ ಭವಿಷ್ಯದ ನಿಯಮವಾಗುತ್ತದೆ. ಎಲ್ಲರ ಪ್ರತಿಯೊಂದು ಸಂಕಲ್ಪ ಭವಿಷ್ಯದ ನಿಯಮಗಳಾಗುತ್ತಿವೆ. ಆದ್ದರಿಂದ ಬಹಳಷ್ಟು ಗಮನ ಕೊಡಬೇಕು. ಇನ್ನೂವರೆಗೂ ಒಂದು ಮಾತನ್ನು ಹಿಡಿದರೆ, ಇನ್ನೊಂದು ಮಾತನ್ನು ಬಿಡುತ್ತಿದ್ದೀರಿ. ವಿಧಿಯನ್ನು( ನಿಯಮ) ಹಿಡಿದರೆ ವಿಧಾನವನ್ನು (ಪ್ರತ್ಯಕ್ಷತೆ /ಪ್ರಾಕ್ಟಿಕಲ್ ಲೈಫ್) ಬಿಟ್ಟು ಬಿಡುತ್ತಿದ್ದೀರಿ. ಒಮ್ಮೆ ವಿಧಾನವನ್ನು ಹಿಡಿಯುತ್ತೀರಿ ಆಗ ವಿಧಿಯನ್ನು ಬಿಡುತ್ತೀರಿ. ಆದರೆ ವಿಧಿ ಮತ್ತು ವಿಧಾನ ಎರಡರ ಜೊತೆಗೆ ವಿಧಾತಾ ನೆನಪಿಗೆ ಬರುತ್ತಾನೆ. ಒಂದು ವೇಳೆ ವಿಧಾತಾ ನೆನಪಿನಲ್ಲಿದ್ದರೆ ವಿಧಿ ಮತ್ತು ವಿಧಾನ ಎರಡೂ ಸ್ಮೃತಿಯಲ್ಲಿರುವವು. ಆದರೆ ವಿಧಾತನನ್ನು ಮರೆತಾಗ ಒಂದು ಬಿಟ್ಟು ಹೋಗುತ್ತದೆ. ವಿಧಾತನ ನೆನಪಿನಲ್ಲಿರುವುದರಿಂದ ವಿಧಿ ಮತ್ತು ವಿಧಾನ ಎರಡೂ ಜೊತೆಗಿರುತ್ತವೆ. ವಿಧಾತನನ್ನು ಮರೆಯುವುದರಿಂದ ಒಮ್ಮೆ ವಿಧಾನ ಬಿಟ್ಟು ಹೋಗುತ್ತದೆ ಅಥವಾ ಒಮ್ಮೆ ವಿಧಿ ಬಿಟ್ಟು ಹೋಗುತ್ತದೆ. ಯಾವಾಗ ಎರಡೂ ಜೊತೆಗಿರುವವೋ ಆಗ ಸಫಲತೆ ಕೊರಳ ಹಾರವಾಗುತ್ತದೆ. ಒಳ್ಳೆಯದು. ಇಂದು ಬಹಳ ಶಿಕ್ಷಣವನ್ನು ಕೊಟ್ಟೆವು. ಇದು ಸ್ನೇಹವಾಗಿದೆ. ಏಕೆಂದರೆ ಬಾಪ್ ದಾದಾ ಸಮಾನ ಮಾಡಲು ಬಯಸುತ್ತಾರೆ. ಸಮಾನ ಮಾಡುವ ಸಾಧನವಾಗಿದೆ ಸ್ನೇಹ, ಈಗ ಕುಮಾರಿಯರ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಸಾಹಸವನ್ನು ಪ್ರತ್ಯಕ್ಷ ತರಲು ಸಾಹಸದಲ್ಲಿ ಬಹಳ ಶಕ್ತಿಯನ್ನು ತುಂಬಬೇಕು. ಈಗ ಎಷ್ಟು ಶಕ್ತಿ ತುಂಬಿದೆ ಎಂದು ಪರೀಕ್ಷೆ ತೆಗೆದುಕೊಳ್ಳುತ್ತೇವೆ. ಒಳ್ಳೆಯದು.

ಪಾರ್ಟಿಯ ಜೊತೆಗೆ :-

1 - ಎಷ್ಟು ತಮ್ಮನ್ನು ಸೇವೆಯ ಬಂಧನದಲ್ಲಿ ಬಂಧಿಸಿಕೊಳ್ಳುತ್ತೀರೋ ಅಷ್ಟು ಬೇರೆ ಬಂಧನಗಳು ಬಿಡುಗಡೆಯಾಗುವವು. ಈ ಬಂಧನದಿಂದ ಬಿಡುಗಡೆಯಾದರೆ ಸೇವೆಯಲ್ಲಿ ತೊಡಗುತ್ತೇವೆ ಎಂದು ತಾವು ಯೋಚಿಸಬೇಡಿ. ಈ ರೀತಿ ಆಗುವುದಿಲ್ಲ. ಸೇವೆಯನ್ನು ಮಾಡುತ್ತಿರಿ. ಬಂಧನವಿದ್ದರೂ ತಮ್ಮನ್ನು ಸೇವೆಯ ಬಂಧನದಲ್ಲಿ ಜೋಡಿಸಿಕೊಳ್ಳಿ. ಈ ಜೋಡಿಸುವುದೇ ಬಿಡಿಸಿಕೊಳ್ಳುವುದು. ಬಿಡಿಸಿಕೊಂಡ ಮೇಲೆ ಜೋಡಿಸಿಕೊಳ್ಳುವುದಿಲ್ಲ. ಎಷ್ಟು ಜೋಡಿಸಿಕೊಳ್ಳುವಿರೋ ಅಷ್ಟೇ ಬಿಡುವುದು. ಎಷ್ಟು ತಮ್ಮನ್ನು ಸೇವೆಗೆ ಸಹಯೋಗಿ ಮಾಡಿಕೊಳ್ಳುವಿರೋ ಅಷ್ಟು ಪ್ರಜೆಗಳು ತಮ್ಮ ಸಹಯೋಗಿಯಾಗುವರು. ಯಾವುದೇ ಕಾರಣವಿರಲಿ ಅದನ್ನು ಹಗುರ ಮಾಡಿಕೊಂಡು ಮೊದಲು ಸೇವೆಯ ಅವಕಾಶವನ್ನು ಮುಂದಿಡಿ. ಕರ್ತವ್ಯವನ್ನು ಮೊದಲು ಇಟ್ಟುಕೊಳ್ಳಬೇಕು. ಕಾರಣವಿದ್ದರೂ ಕರ್ತವ್ಯದ ಬಲದಿಂದ ಸಡಿಲವಾಗುತ್ತವೆ.

- ಮಾತೆಯರ ಸಂಘಟನೆಗಳಲ್ಲಿ ನುಗ್ಗಿರಿ, ಸದಸ್ಯರಾಗುವುದರಿಂದ ಅನೇಕರನ್ನು ತಮ್ಮ ಸಮಾನ ಮಾಡಿಕೊಳ್ಳುವ ಅವಕಾಶ ಸಿಗುವುದು. ಸಂಪರ್ಕದಲ್ಲಿ ಬರುವುದರಿಂದ ಅವಕಾಶಗಳು ಸಿಗುವವು. ಈಗ ಮಾತೆಯರ ಸಂಸ್ಥೆಗಳಲ್ಲಿ ತಮ್ಮಗಳ ಹೆಸರು ಇನ್ನೂ ಪ್ರಸಿದ್ಧಿಯಾಗಿಲ್ಲ. ಮೊದಲು ಗುಪ್ತ ವೇಷದಲ್ಲಿ ಹೆಜ್ಜೆ ಇಡಿ ನಂತರ ಅವರು ನಿಮ್ಮವರಾಗುವರು, ಅಲೆದಾಡುವ ಮಾತೆಯರಿಗೆ ದಾರಿ ತೋರಿಸಬೇಕು. ನೋವನ್ನು ಸಹನೆ ಮಾಡುವ ಮಾತೆಯರನ್ನು ತಾವು ರಕ್ಷಿಸಬಹುದು. ಅನೇಕ ಮಾತೆಯರು ಆಶ್ರಯ ಬಯಸುತ್ತಾರೆ, ಅವರಿಗೆ ಆಶ್ರಯ ಸಿಗುವುದು. ಆದ್ದರಿಂದ ಈ ಸೇವೆಯನ್ನು ಮಾಡಿ ಅದ್ಭುತವನ್ನು ಮಾಡಿ ತೋರಿಸಿ ನಂತರ ನೋಡಿ ಎಷ್ಟೊಂದು ಭುಜಗಳು (558) ಸಿಗುತ್ತಾರೆ. ಬಹಳ ಸಮಯದ ಈ ಮಾತನ್ನು ಪ್ರಾಕ್ಟಿಕಲ್ನಲ್ಲಿ ತರಬೇಕು. ಅನಾಥರ ಆಶ್ರಮದಲ್ಲಿ ಆಶ್ರಯ ಸಿಗುತ್ತದೆ ಆದರೆ ಇದು ಸನಾಥಾಶ್ರಮವಾಗಿದೆ. ಒಳ್ಳೆಯದು.

3 – ಅವ್ಯಕ್ತ ಸ್ಥಿತಿಯ ಅನುಭವವಾಗುತ್ತದೆಯೇ? ಒಂದು ಕ್ಷಣದಲ್ಲಿ ಅವ್ಯಕ್ತ ಸ್ಥಿತಿಯ ಅನುಭವವಾದರೆ ಅದರ ಪರಿಣಾಮ ಬಹಳ ಸಮಯದವರೆಗೆ ಇರುತ್ತದೆ. ಅವ್ಯಕ್ತ ಸ್ಥಿತಿಯ ಅನುಭವ ಶಕ್ತಿಶಾಲಿಯಾಗಿರುತ್ತದೆ. ಎಷ್ಟು ಸಾಧ್ಯವೋ ಅಷ್ಟು ತಮ್ಮ ಸಮಯವನ್ನು ವ್ಯಕ್ತ ಭಾವದಿಂದ ದೂರ ಮಾಡಿ ಅವ್ಯಕ್ತ ಸ್ಥಿತಿಯಲ್ಲಿರಬೇಕು. ಅವ್ಯಕ್ತ ಸ್ಥಿತಿಯಿಂದ ಸರ್ವ ಸಂಕಲ್ಪಗಳು ಸಿದ್ಧವಾಗುವವು. ಇದರಲ್ಲಿ ಪರಿಶ್ರಮ ಕಡಿಮೆ ಮತ್ತು ಪ್ರಾಪ್ತಿ ಅಧಿಕವಿರುತ್ತದೆ. ವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ ಪುರುಷಾರ್ಥ ಮಾಡಲು ಪರಿಶ್ರಮ ಅಧಿಕ ಮತ್ತು ಪ್ರಾಪ್ತಿ ಕಡಿಮೆಯಾಗುತ್ತದೆ. ಆಮೇಲೆ ಮುಂದುವರೆಯುತ್ತಾ ಗೊಂದಲ ಮತ್ತು ನಿರಾಶೆ ಬರುತ್ತದೆ. ಆದ್ದರಿಂದ ಅವ್ಯಕ್ತ ಸ್ಥಿತಿಯಲ್ಲಿ ಸರ್ವ ಪ್ರಾಪ್ತಿಗಳ ಅನುಭವವನ್ನು ಹೆಚ್ಚಿಸಿ. ಅವ್ಯಕ್ತ ಮೂರ್ತಿಯನ್ನು ಎದುರಿಗೆ ನೋಡಿ ಸಮಾನರಾಗುವ ಪ್ರಯತ್ನ ಮಾಡಬೇಕು. ಹೇಗೆ ತಂದೆಯೋ ಹಾಗೆಯೇ ಮಕ್ಕಳು. ಈ ಸ್ಲೋಗನ್ ನೆನಪಿಡಿ. ಅಂತರವಿರಬಾರದು. ಅಂತರವನ್ನು ಅಂತರ್ಮುಖಿಯಾಗಿ ಅಳಿಸಿಹಾಕಬೇಕು. ತಂದೆ ಎಂದಾದರೂ ನಿರಾಶರಾಗುತ್ತಾರೆಯೇ? ಪರಿಸ್ಥಿತಿಗಳಿಂದ ಭಯವೇ? ಹಾಗಾದರೆ ಮಕ್ಕಳು ಏಕೆ ಭಯಪಡುತ್ತೀರಿ? ಹೆಚ್ಚು ಪರಿಸ್ಥಿತಿಗಳನ್ನು ಎದುರಿಸುವ ಸಾಕಾರದಲ್ಲಿ ಉದಾಹರಣೆಯನ್ನು ನೋಡಿದಿರಿ, ಎಂದಾದರೂ ಅವರ ಭಯಪಟ್ಟ ರೂಪವನ್ನು ನೋಡಿದಿರಾ? ಯಾವಾಗಲೂ ಸ್ನೇಹದಲ್ಲಿ ಸಂಪೂರ್ಣರಾಗಬೇಕು ಎಂಬುದನ್ನು ನೆನಪಿಟ್ಟುಕೊಳ್ಳಿ ಎಂದು ಹೇಳಿದ್ದೆವಲ್ಲವೇ? ಕಠಿಣವೇನಿಲ್ಲ. ಸ್ನೇಹಿಯಾಗಿರುವವರಿಗೆ ಪರಿವೆಯಿರುತ್ತದೆಯೇ? ತಮ್ಮನ್ನು ತಾವು ದೇಹವೆಂಬುದನ್ನು ಅಳಿಸಿಕೊಂಡಾಗ ಇದು ಕಠಿಣವೇಕೆ? ಅಳಿಸಿರುವಿರಲ್ಲವೇ? ಅಳಿಸಿ ಹೋದವರು ಭಸ್ಮವಾಗುತ್ತಾರೆ. ಎಷ್ಟು ತಮ್ಮನ್ನು ಅಳಿಸಿಹಾಕುವಿರೋ ಅಷ್ಟು ಅವ್ಯಕ್ತ ರೂಪದಿಂದ ಭೇಟಿಯಾಗುವಿರಿ, ಅಳಿಸಿ ಹಾಕುವುದು ಕಡಿಮೆಯಾದರೆ ಭೇಟಿಯಾಗುವುದು ಕಡಿಮೆಯಾಗುವುದು. ಒಂದು ವೇಳೆ ಮೇಳದಲ್ಲಿಯೂ ಮಿಲನ ಮಾಡದಿದ್ದರೆ ಮೇಳ ಸಮಾಪ್ತಿಯಾಗುವುದು ನಂತರ ಯಾವಾಗ ಮಿಲನವಾಗುವುದು? ಸ್ನೇಹವನ್ನು ಸಮಾನತೆಯಲ್ಲಿ ಬದಲಿಮಾಡಬೇಕು. ಸ್ನೇಹವನ್ನು ಗುಪ್ತ ಮತ್ತು ಸಮಾನತೆಯನ್ನು ಪ್ರತ್ಯಕ್ಷ ಮಾಡಿ, ಎಲ್ಲವೂ ಸಮಾವೇಶವಾಗಿದೆ ಕೇವಲ ಪ್ರತ್ಯಕ್ಷ ಮಾಡಬೇಕು. ತಮ್ಮ ಕಲ್ಪದ ಹಿಂದಿನ ಸಮಾವೇಶಗೊಂಡ ಸಂಸ್ಕಾರಗಳನ್ನು ಪ್ರತ್ಯಕ್ಷ ಮಾಡಬೇಕು. ಕಲ್ಪದ ಹಿಂದಿನ ತಮ್ಮ ಸಫಲತೆಯ ಸ್ವರೂಪ ನೆನಪಿಗೆ ಬರುತ್ತದೆಯಲ್ಲವೇ? ಈಗ ಕೇವಲ ಸಮಾವೇಶವಾದವುಗಳನ್ನು ಪ್ರಾಕ್ಟಿಕಲ್ನಲ್ಲಿ (ಪ್ರತ್ಯಕ್ಷ ರೂಪದಲ್ಲಿ) ತರಬೇಕು. ಸದಾ ತಮ್ಮ ಸಂಪೂರ್ಣತೆಯ ಸ್ವರೂಪ ಮತ್ತು ಭವಿಷ್ಯ 21 ಜನ್ಮಗಳ ರೂಪವನ್ನು

ಎದುರಿಗೆ ಇಟ್ಟುಕೊಳ್ಳಬೇಕು. ಅನೇಕರು ತಮ ಮನೆಯನ್ನು ಶೃಂಗರಿಸಲು ಬಾಲ್ಯದಿಂದ ಹಿಡಿದು ಭಿನ್ನ ಭಿನ್ನ ರೂಪಗಳ ಸ್ಮೃತಿಚಿಹ್ನೆಗಳನ್ನು ಇಡುತ್ತಾರೆ. ಆದ್ದರಿಂದ ತಾವು ತಮ್ಮ ಮನ ಮಂದಿರದಲ್ಲಿ ತಮ್ಮ ಸಂಪೂರ್ಣ ಸ್ವರೂಪದ ಮೂರ್ತಿ, ಭವಿಷ್ಯದ ಅನೇಕ ಜನ್ಮಗಳ ಮೂರ್ತಿಗಳನ್ನು ಸ್ಪಷ್ಟ ರೂಪದಲ್ಲಿ ಮುಂದಿಟ್ಟುಕೊಂಡಾಗ ಬೇರೆ ಯಾವ ಕಡೆಗೂ ಸಂಕಲ್ಪ ಬರುವುದಿಲ್ಲ.

ಸಮೀಪ ರತ್ನಗಳ ಲಕ್ಷಣವೇನು? ಯಾರು ಸಮೀಪವಿರುವರೋ ಅವರ ಸಂಸ್ಕಾರಗಳಲ್ಲಿಯೂ ಸಮಾನತೆಯಿರುವುದು. ಎಷ್ಟು ಯಾರು ಬಾಪ್ ದಾದಾರ ಸಮೀಪ ಅರ್ಥಾತ್ ಲಕ್ಷಣದ ಸಮೀಪ ಬನ್ನಿ, ಎಷ್ಟು ಪರಿಶೀಲನೆ ಮಾಡಿಕೊಳ್ಳುವಿರೋ ಅಷ್ಟು ಬೇಗನೇ ಪರಿವರ್ತನೆಯಾಗುವಿರಿ. ಆದಿ ಸ್ವರೂಪವನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳಿ, ಸತ್ಯಯುಗದ ಆದಿ ಮತ್ತು ಮರುಜೀವಾ ಜೀವನದ ಆದಿ ರೂಪವನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳುವುದರಿಂದ ಮಧ್ಯವೆಲ್ಲಾ ಸಮಾವೇಶವಾಗುವುದು. ಸ್ನೇಹಿಯಾಗಿರುವಿರೋ ಸಹಯೋಗಿಯಾಗಿರುವಿರೋ? ಯಾರೊಂದಿಗೆ ಸ್ನೇಹವಿರುತ್ತದೆಯೋ ಅವರಿಗೆ ಹಿಂತಿರುಗಿ ಏನನ್ನು ಕೊಡಲಾಗುತ್ತದೆ? ಸ್ನೇಹದ ರಿಟರ್ನ್ ಸಹಯೋಗವಾಗಿದೆ. ಅದನ್ನು ಯಾವಾಗ ಕೊಡುವಿರಿ? ಹೇಗೆ ತಂದೆ ಸರ್ವ ಸಮರ್ಥನೋ ಹಾಗೆಯೇ ಮಕ್ಕಳೂ ಮಾಸ್ಟರ್ ಸರ್ವ ಸಮರ್ಥರಾಗಬೇಕು. ವಿನಾಶದ ಮೊದಲು ಸ್ನೇಹದ ಜೊತೆಗೆ ಸಹಯೋಗಿಯಾದರೆ ಆಸ್ತಿಗೆ ಅಧಿಕಾರಿಯಾಗುವಿರಿ, ವಿನಾಶದ ಸಮಯ ಎಲ್ಲಾ ಆತ್ಮರು ಗುರುತಿಸಬಹುದು ಆದರೆ ಸಹಯೋಗಿಯಾಗುವುದಿಲ್ಲಯಆದ್ದರಿಂದ ಆಸ್ತಿಯನ್ನು ಪಡೆಯಲಾರರು.

4 - ಕರ್ಮಬಂಧನ ಶಕ್ತಿಶಾಲಿಯಾಗಿದೆಯೋ ಅಥವಾ ಈಶ್ವರೀಯ ಬಂಧನವೋ? ಈಶ್ವರೀಯ ಬಂಧನಗಳನ್ನು ತೀವ್ರ ಮಾಡಿದರೆ ಕರ್ಮಬಂಧನ ತಾವೇ ಸಡಿಲವಾಗುತ್ತವೆ. ಬಂಧನದಿಂದಲೇ ಬಂಧನ ಕತ್ತರಿಸುವುದು. ಎಷ್ಟು ಈಶ್ವರೀಯ ಬಂಧನದಲ್ಲಿ ಬಂಧಿಸಲ್ಪಡುವಿರೋ ಅಷ್ಟು ಕರ್ಮಬಂಧನದಿಂದ ಬಿಡುಗಡೆಯಾಗುವಿರಿ, ಎಷ್ಟು ಆ ಕರ್ಮಬಂಧನ ಗಟ್ಟಿಯಾಗಿದೆಯೋ ಅಷ್ಟು ಈ ಈಶ್ವರೀಯ ಬಂಧನವನ್ನು ಗಟ್ಟಿ ಮಾಡಿಕೊಳ್ಳಿ. ಆಗ ಆ ಬಂಧನ ಬೇಗನೆ ಕತ್ತರಿಸುವುದು.

5 - ಬಿಂದು ರೂಪದಲ್ಲಿ ಹೆಚ್ಚು ಉಳಿಯಲು ಸಾಧ್ಯವಾಗದಿದ್ದರೆ ಅದಕ್ಕಾಗಿ ಸಮಯ ಕಳೆಯಬೇಡಿ. ಮೊದಲು ಶುದ್ಧ ಸಂಕಲ್ಪಗಳ ಅಭ್ಯಾಸವಿದ್ದಾಗ ಬಿಂದು ರೂಪದಲ್ಲಿ ಉಳಿಯಲು ಸಾಧ್ಯ. ಶುದ್ಧ ಸಂಕಲ್ಪಗಳಿಂದ ಅಶುದ್ಧ ಸಂಕಲ್ಪಗಳನ್ನು ದೂರ ಮಾಡಿ, ಹೇಗೆ ಅಪಘಾತವಾಗುವ ಸಂದರ್ಭದಲ್ಲಿ ಬ್ರೇಕ್ ಕೆಲಸ ಮಾಡದಿದ್ದರೆ ತಿರುಗಿಸಲಾಗುತ್ತದೆ. ಅದೇ ರೀತಿ ಬಿಂದು ರೂಪವಾಗಿದೆ ಬ್ರೇಕ್. ಅದು ತಾಗದಿದ್ದರೆ ವ್ಯರ್ಥ ಸಂಕಲ್ಪಗಳಿಂದ ಬುದ್ಧಿಯನ್ನು ತಿರುಗಿಸಿ ಶುದ್ಧ ಸಂಕಲ್ಪಗಳಲ್ಲಿ ನಿಲ್ಲಿಸಿ. ಒಮ್ಮೊಮ್ಮೆ ಕೆಲವು ಸಂದರ್ಭದಲ್ಲಿ ರಕ್ಷಣೆಗೆ ಬ್ರೇಕ್ ಹಾಕಲಾಗುವುದಿಲ್ಲ, ತಿರುಗಿಸಬೇಕಾಗುತ್ತದೆ. ಇಡೀ ದಿನ ಯಾವುದೇ ವ್ಯರ್ಥ ಸಂಕಲ್ಪಗಳು ನಡೆಯದಂತೆ ಪ್ರಯತ್ನ ಮಾಡಿ. ಯಾವಾಗ ಈ ವಿಷಯವನ್ನು ಪಾಸ್ ಮಾಡುವಿರೋ ಆಗ ಬಿಂದು ರೂಪದ ಸ್ಥಿತಿ ಸಹಜವಾಗಿರುವುದು.

ಅವ್ಯಕ್ತ ಮುರಳಿ 07-06-1970.

***ದಿವ್ಯ ಮೂರ್ತಿಯಾಗುವ ವಿಧಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಂಕಲ್ಪಗಳನ್ನು ಗ್ರಹಿಸುವ ಅಭ್ಯಾಸದಿಂದ ಸಹಜವಾಗಿ ಸಂಕಲ್ಪರಹಿತವಾಗಿ ತಯಾರಾಗಿದ್ದೇನೆ.

2. ನಾನು ಪ್ರತಿಯೊಬ್ಬರ ಸಂಕಲ್ಪಗಳನ್ನು ಗ್ರಹಿಸುವ ಅಭ್ಯಾಸದಿಂದ ಸಹಜವಾಗಿ ಒಂದೇ ಸಂಕಲ್ಪದಲ್ಲಿ, ಏಕರಸ ಸ್ಥಿತಿಯಲ್ಲಿ ಒಂದೇ ಕ್ಷಣದಲ್ಲಿ ಸ್ಥಿತವಾಗಬಲ್ಲ ಸಂಪೂರ್ಣ ಸ್ವರೂಪ.

3. ನಾನು ನನ್ನ ಅವ್ಯಕ್ತ ಸ್ಥಿತಿಯಿಂದ ಯಾರ ಭಾವನೆಯನ್ನಾದರೂ ಪೂರ್ಣ ಸ್ಪಷ್ಟವಾಗಿ ತಿಳಿದುಕೊಂಡಿದೇನೆ.

4. ನಾನು 'ಸರಳತೆ, ಶ್ರೇಷ್ಠತೆ ಮತ್ತು ಸಹನಶೀಲತೆ' ಈ ಮೂರು ವಿಷಯಗಳನ್ನು ಸಂಪೂರ್ಣವಾಗಿ ಧಾರಣೆ ಮಾಡಿ ನನ್ನ ಸ್ಥಿತಿಯನ್ನು ಸ್ವಚ್ಛವಾಗಿ ಮತ್ತು ಸ್ಪಷ್ಟವಾಗಿ ತಯಾರಿಸಿಕೊಂಡಿದ್ದೇನೆ.

5. ನಾನು ಸಾಧಾರಣತೆಯನ್ನು ಶ್ರೇಷ್ಠತೆಯಲ್ಲಿ ಪರಿವರ್ತಿಸಿಕೊಂಡು ಪ್ರತಿ ಕಾರ್ಯದಲ್ಲಿ ಸಹನಶೀಲತೆಯನ್ನು, ಮುಖದಲ್ಲಿ, ವಾಣಿಯಲ್ಲಿ ಸರಳತೆಯನ್ನು, ಧಾರಣೆ ಮಾಡಿ ಸೇವಾ ಕರ್ತವ್ಯದಲ್ಲಿ ಶ್ರೇಷ್ಠವಾದ ಸಫಲತೆಯನ್ನು ಪಡೆದಿದ್ದೇನೆ.

6. ನಾನು ಯಾವ ಹಳೆಯ ಸಂಸ್ಕಾರಗಳ ಕಲೆ ಇಲ್ಲದೆ ಸ್ವಚ್ಛವಾಗಿ ತಯಾರಾಗಿ ಯೋಜನೆ ಮತ್ತು ಪ್ರತ್ಯಕ್ಷತೆಯನ್ನು ಸಮಾನವಾಗಿ ಮಾಡಿಕೊಂಡಿದ್ದೇನೆ.

7. ನಾನು ದಿವ್ಯ ಮೂರ್ತಿ.

8. ನಾನು ಇಲ್ಲಿ (ಸಂಗಮಯುಗ) ಎಲ್ಲರಿಗೂ ಗೌರವವನ್ನು ಕೊಟ್ಟು ಅಲ್ಲಿ (ಸತ್ಯಯುಗ) ಎಲ್ಲರಿಂದ ಗೌರವವನ್ನು ಪಡೆದಿದ್ದೇನೆ.

9. ನಾನು 'ಗೌರವವನ್ನು ಕೊಡುವುದೇ ತೆಗೆದು ಕೊಳ್ಳುವುದು' ಎಂಬ ಪಾಠವನ್ನು ಪಕ್ಕಾ ಮಾಡಿಕೊಂಡಿದ್ದೇನೆ.

10. ನಾನು 'ಆಗಲಿ' ಎಂಬ ಮಾತನ್ನು ಇಲ್ಲಿ( ಸಂಗಮ ಯುಗ) ಧಾರಣೆ ಮಾಡಿ ಅಲ್ಲಿ (ಸತ್ಯಯುಗ) 'ಆಗಲಿ' ಎಂಬ ಪ್ರಜೆಗಳನ್ನು ಪಡೆದಿದ್ದೇನೆ.

11. ಕಾನೂನು ನಿರ್ಮಾಪಕನಾದ ನಾನು 'ಯಾವ ಕರ್ಮ ಮಾಡುತ್ತೇನೆಯೋ ಅದು ಭವಿಷ್ಯದಲ್ಲಿ ನಿಯಮವಾಗಿ ತಯಾರಾಗುತ್ತದೆ' ಎಂಬ ಗಮನವಿಟ್ಟು ಪ್ರತಿಯೊಂದು ಕರ್ಮವನ್ನು ಆಚರಿಸುತ್ತಿದ್ದೇನೆ.

12. ನಾನು ವಿಧಿ, ವಿಧಾನದ ಸ್ಮೃತಿಯಿಂದ ವಿಧಾತನ ಸ್ಮೃತಿಯಲ್ಲಿದ್ದು ಸಫಲತೆಯನ್ನು ನನ್ನ ಕೊರಳಹಾರವಾಗಿ ಮಾಡಿಕೊಂಡಿದ್ದೇನೆ.